# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆಃ 1299/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ನರಸಿಂಹಯ್ಯ | ಸಿಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | – | ರಾಮಯ್ಯ | ಪಿಡಬ್ಲ್ಯೂ-3 |
| ವಯಸ್ಸು | – | ಸು.47 ವರ್ಷ | ಪ್ರ.ವ.ಬೋ<br>ದಿನಾಂಕಃ06.06.2024 |
| ಉದ್ಯೋಗ | – | ಬಟ್ಟೆ ವ್ಯಾಪಾರ | |
| ವಾಸ | – | ತುಮಕೂರು. | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

ಚಾಸಾ-1 ನನ್ನ ತಾಯಿ. ಚಾಸಾ-2 ಪರಿಚಯ ಇರುತ್ತಾರೆ. ಚಾಸಾ-4 ನನ್ನ ತಂಗಿ. ಆರೋಪಿತರು ಪರಿಚಯ ಇರುತ್ತಾರೆ. ಚಾಸಾ-4 ರವರು ಅಂಬಲಗೆರೆಯಲ್ಲಿ ಸೈಟಿನ ವಿಚಾರವಾಗಿ ಅವರ ಗಂಡನ ಮನೆಯವರ ಕಡೆ ಗಲಾಟೆಯಾಗಿತ್ತು. ಆ ವಿಷಯದಲ್ಲಿ ಚಾಸಾ-1 ರವರು ನ್ಯಾಯ ಪಂಚಾಯಿತಿ ಮಾಡಿ ಅನುಸರಿಸಿಕೊಂಡು ಹೋಗಿ ಎಂದು ಹೇಳಿ ಬಂದಿರುತ್ತಾರೆ. ಅದೇ ವಿಚಾರವಾಗಿ ದಿನಾಂಕಃ26.01.2020 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಚಾಸಾ-1 ರವರು ಹಿರಿಯೂರು ನಗರದ ಸರ್ಕಾರಿ ಆಸ್ಪತ್ರೆಯ ಮುಂಭಾಗ ವ್ಯಾಪಾರಕ್ಕಾಗಿ ಅಂಗಡಿ ಹಾಕಿಕೊಂಡು ಕುಳಿತಿದ್ದಾಗ ಆರೋಪಿತರು ಏಕಾಏಕಿ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ. ಚಪ್ಪಲಿ ಕಾಲಿನಲ್ಲಿ ಚಾಸಾ-1 ರವರನ್ನು ತುಳಿದಿರುತ್ತಾರೆ. ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ನಂತರ ಆಟೋದಲ್ಲಿ ಅಲ್ಲಿಂದ ಹೋಗಿರುತ್ತಾರೆ. ಈ ವಿಷಯವನ್ನು ಚಾಸಾ-2 ರವರು ನನಗೆ ಫೋನ್ ಮಾಡಿ ತಿಳಿಸಿದರು. ನಾನು ಆಗ ನೇರವಾಗಿ ಘಟನಾ ಸ್ಥಳಕ್ಕೆ ಬಂದಿದ್ದು ಚಾಸಾ-1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ. ಚಾಸಾ-1 ರವರಿಗೆ ಸೊಂಟಕ್ಕೆ, ಬೆನ್ನಿಗೆ ಮತ್ತು ಕೈಗಳಿಗೆ ಸಾಮಾನ್ಯ ಸ್ವರೂಪದ ಗಾಯಳಾಗಿರುತ್ತವೆ. ಪೊಲೀಸ್‌ರು ನನಗೆ ಘಟನೆಯ ಬಗ್ಗೆ ವಿಚಾರಣೆ ಮಾಡಿದ್ದು ನಾನು ಅವರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು

ನೋಡಿದರೆ ಗುರುತಿಸುತ್ತೇನೆ. (ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರು ಇರುವ ಆರೋಪಿತರ ಗುರುತಿಸುವಿಕೆಗೆ ಆರೋಪಿತರ ಪರ ವಕೀಲರು ತಕರಾರು ಇರುವುದಿಲ್ಲ ಎಂದು ತಿಳಿಸಿ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ).

**ಪಾಟೀ-ಸವಾಲುಃ ಆರೋಪಿ ಪರ ಶ್ರೀ ಆರ್.ಬಿ.ಆರ್. ವಕೀಲರಿಂದಃ-**

ಈ ಕೇಸಿಗೆ ಸಂಬಂಧಿಸಿ ನಾನು 2-3 ಬಾರಿ ಠಾಣೆಗೆ ಹೋಗಿರುತ್ತೇನೆ. ಮೊದಲನೇ ಬಾರಿ ಘಟನೆ ನಡೆದ ದಿನ ಹೋಗಿರುತ್ತೇನೆ ನಂತರದಲ್ಲಿ ದೂರು ಕೊಟ್ಟ ಮಾರನೇ ದಿನ ಹೋಗಿರುತ್ತೇನೆ. ಪೊಲೀಸ್‌ರಿಗೆ ದೂರನ್ನು ನಾನೇ ಹೇಳಿ ಬರೆಸಿರುತ್ತೇನೆ. ದೂರನ್ನು ನಾನೇ ಹೇಳಿ ಬರೆಸಿರುತ್ತೇನೆ. ಪೊಲೀಸ್‌ರಿಗೆ ದೂರು ನೀಡಿ 10 ದಿನಗಳಾದ ನಂತರ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ದೂರನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದು ಹೇಳಿರುತ್ತೇನೆ. ಆರೋಪಿತರು ಮತ್ತು ಚಾಸಾ-4 ರವರು ಸಂಬಂಧಿಕರು ಎಂದರೆ ಸರಿ. ನಿವೇಶನದ ವಿಚಾರಕ್ಕಾಗಿ ಅವರ ಮಧ್ಯ ಗಲಾಟೆಯಾಗುತ್ತಿತ್ತು ಎಂದರೆ ಸರಿ. ಚಾಸಾ-1 ರವರು ಗಲಾಟೆ ನಡೆದ 2-3 ದಿನಗಳ ಹಿಂದೆ ರಾಜೀ ಪಂಚಾಯಿತಿ ಮಾಡಿದ್ದರು. ನಾನು ಹೇಳುವಂತೆ ಚಾಸಾ-1 ರವರು ಆರೋಪಿತರ ಮತ್ತು ಚಾಸಾ-4 ರವರ ನಡುವೆ ಯಾವುದೇ ರಾಜೀ ಪಂಚಾಯಿತಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಗಲಾಟೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆರೋಪಿತರು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಆರೋಪಿ ನನ್ನ ಮತ್ತು ನನ್ನ ಭಾವನ ಮೇಲೆ ಒಂದು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಅದು ಕ್ರಿಮಿನಲ್ ಪ್ರಕರಣ ಸಂಖ್ಯೆ1313/2020 ರಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.